ಬಿತ್ತನೆ ರೇಷ್ಮೆ ಮೊಟ್ಟೆ ಹಂಚಿಕೆ ಬಗ್ಗೆ

೧೩೨೧. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ರೇಷ್ಮೆ, ಪಶು ಸಂಗೋಪನೆ ಮಂತ್ರಿ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸರಾಸರಿ ವಾರ್ಷಿಕವಾಗಿ ಬಿತ್ತನೆ ಮೊಟ್ಟೆ ಎಷ್ಟು ಬೇಕಾಗಿದೆ. ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಬಿತ್ತನೆ ಕೋಠಿಗಳಲ್ಲಿ ಉತ್ಪಾದನೆಯು ಪ್ರಮಾಣವೆಷ್ಟು ?

ಆ) ಖಾಸಗೀ ವಲಯದ ಉತ್ಪಾದನೆ ಎಷ್ಟು ಹಾಗೂ ಶೇಕಡಾವಾರು ಎಷ್ಟು ಸರ್ಕಾರಿ ಬಿತ್ತನೆ ಕೋಠಿಗಳಲ್ಲಿ ಶೀಥಲೀಕರಣಗಳನ್ನೇನಾದರೂ ವ್ಯವಸ್ಥೆ ಮಾಡಲಾಗಿದೆಯೆ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಸಚಿವರು).—

ಅ) ರಾಜ್ಯದಲ್ಲಿ ವಾರ್ಷಿಕವಾಗಿ ಸರಾಸರಿ ಸುಮಾರು ೧೭ ಕೋಟಿ ರೇಷ್ಮೆ ಮೊಟೆ(ಲೇಯಿಂಗ್ಸ್) ಬೇಕಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಗಳಲ್ಲಿ ಉತ್ಪಾದನೆಯಾದ ರೇಷ್ಮೆ ಮೊಟ್ಟೆಯ (ಲೇಯಿಂಗ್ಸ್) ವಿವರಗಳನ್ನು ಈ ಕೆಳಗೆ ನಮೂದಿಸಿದೆ :

	(ಲೇಯಿಂಗ್ಸ್ — ಲಕ್ಷಗಳಲ್ಲಿ)		
	೧೯೮೩–೮೪	೧೯೮೪–೮೫	೧೯೮೫–೮೬
೧. ರಾಜ್ಯ ಸರ್ಕಾರದ ರೇಷ್ಮೆ ಬಿತ್ತನೆ ಕೋಠಿಗಳು	೮೮೪.೬೮	೭೮೯.೭೭	೭೯೧.೨೮
೨. ಕೇಂದ್ರ ಸರಕಾರದ ಬಿತ್ತನೆ ಕೋಠಿಗಳು (ರಾಷ್ಟ್ರೀಯ ರೇಷ್ಮೆ ಮೊಟ್ಟೆ ಉತ್ಪಾದನಾ ಯೋಜನೆ) ಕೇಂದ್ರ ರೇಷ್ಮೆ ಮಂಡಳಿ	೯೮.೨೪	೬೨.೯೮	೭೪.೩೦
ಒಟ್ಟು	೯೮೨.೯೨	೮೫೨.೭೫	೮೬೫.೫೮

ಆ) ಖಾಸಗೀ ವಲಯದ ರೇಷ್ಮೆ ಮೊಟ್ಟೆ ಹಾಗೂ ಶೇಕಡಾವಾರು ಈ ಕೆಳಕಂಡಂತಿದೆ :

	೧೯೮೩–೮೪	೧೯೮೪–೮೫	೧೯೮೫–೮೬
ಉತ್ಪಾದನೆ (ಲಕ್ಷಗಳಲ್ಲಿ)	೮೫೮ ೫೧	೭೪೮.೪೭	೮೦೨.೩೬
ಶೇಕಡಾವಾರು	೪೬.೬೨	೪೭.೯೧	೪೮.೧೪

ಸರ್ಕಾರಿ ಬಿತ್ತನೆ ಕೋಠಿಗಳಲ್ಲಿ ತಯಾರಿಸಿದ ರೇಷ್ಮೆ ಮೊಟ್ಟೆಗಳ ಶೀಥಲೀಕರಣಕ್ಕಾಗಿ ವ್ಯವಸ್ಥೆ ಮಾಡಲಾಗಿದೆ.

ಭದ್ರಾವತಿ ವಿ.ಐ.ಎಸ್.ಎಲ್. ಮಿಸ್ ಮೇನೇಜ್‌ಮೆಂಟ್ ಬಗ್ಗೆ

(೧೩೨೯) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಲ್ಲಿ ಭದ್ರಾವತಿ ವಿಶ್ವೇಶ್ವರಯ್ಯ ಕಬ್ಬಿಣ ಹಾಗೂ ಉಕ್ಕು ಕಾರ್ಖಾನೆಗೆ ಸರ್ಕಾರದವರು ಹಾಕಿರುವ ಬಂಡವಾಳವೆಷ್ಟು ಹಾಗೂ ಸದರಿ ಸಾಲುಗಳಲ್ಲಿ ಕಾರ್ಖಾನೆಗೆ ಆದ ಲಾಭ ಹಾಗೂ ನಷ್ಟದ ವಿವರಗಳನ್ನು ಕೊಡುವುದು.

ಆ) ಇದರಲ್ಲಿ ಪೆಚ್ಚಾಗಿ ಉದ್ಯಮದ ಅವ್ಯವಹಾರದಿಂದಾಗಿ ನಷ್ಟಕ್ಕೆ ಒಳಗಾಗಿದೆಯೆಂಬ ಅನೇಕ ದೂರುಗಳಿರುವುದು ನಿಜವಲ್ಲವೇ ?

ಇ) ಹಾಗಿದ್ದಲ್ಲಿ ಇದರ ಪರಿಸ್ಥಿತಿಯನ್ನು ಸುಧಾರಿಸುವ ಪ್ರಯತ್ನ ಮಾಡದಿರಲು ಕಾರಣಗಳೇನು?